# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಕೋಲಾರ ಜಿಲ್ಲೆ, ಕೋಲಾರ ತಾಲ್ಲೂಕು, ಕುರುಗಲ್ ಗ್ರಾಮ ಪಂಚಾಯತ್‌ನ ಕಾರ್ಯದರ್ಶಿಯಾಗಿದ್ದ ಶ್ರೀ ಕೆ ಶಿವಾನಂದ ಕುಮಾರ್ (ಪ್ರಸ್ತುತ ಹುತ್ತೂರು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ) ರವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ ನಿಯಮ 14(ಎ) ಅಡಿಯಲ್ಲಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಬಗ್ಗೆ – ಆದೇಶ.

**ಓದಲಾಗಿದೆ:**

ನಿಬಂಧಕರು ಕರ್ನಾಟಕ ಲೋಕಾಯುಕ್ತ ಬೆಂಗಳೂರು, ಇವರ **D.O.No.Compt/Uplok/BD-1000/2006/DRE-4,** ದಿನಾಂಕ: 04-04-2019.

**ಪ್ರಸ್ತಾವನೆ:**

ನಿಬಂಧಕರು, ಕರ್ನಾಟಕ ಲೋಕಾಯುಕ್ತ ಇವರ ಪತ್ರದ ಸಂಗಡ ಕಳುಹಿಸಿರುವ ಮಾನ್ಯ ಉಪಲೋಕಾಯುಕ್ತರು ರವರು ದಿನಾಂಕ: 02–04–2019 ರಂದು ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(3) ರ ಅನ್ವಯ ಸಲ್ಲಿಸಿರುವ ವರದಿಯಲ್ಲಿ ಕೋಲಾರ ಜಿಲ್ಲೆ ಮತ್ತು ತಾಲ್ಲೂಕು ಕುರುಗಲ್ ಗ್ರಾಮ ಮತ್ತು ಅಂಚೆ ನಿವಾಸಿಯಾದ ಶ್ರೀ ಕೆ.ಆರ್. ಮಂಜುನಾಥ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಕೋಲಾರ ಜಿಲ್ಲೆ ಮತ್ತು ತಾಲ್ಲೂಕು ಕುರುಗಲ್ ಗ್ರಾಮ ಪಂಚಾಯತ್‌ನ ಕಾರ್ಯದರ್ಶಿಯಾಗಿದ್ದ 1) ಶ್ರೀ ಕೆ. ಶಿವಾನಂದ ಕುಮಾರ್ (ಪ್ರಸ್ತುತ ಹುತ್ತೂರು ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ) ಮತ್ತು 2) ಶ್ರೀ ನಾರಾಯಣಸ್ವಾಮಿ (ಇನ್ನು ಮುಂದೆ ಕ್ರಮವಾಗಿ, '1 ಮತ್ತು 2ನೇ ಎದುರುದಾರರು' ಎಂದುಕರೆಯಲ್ಪಡುತ್ತಾರೆ) ರವರ ವಿರುದ್ಧ ದುರ್ನಡತೆ, ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9 ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

ದೂರಿನ ಸಂಕ್ಷಿಪ್ತ ವಿವರಣೆ:– ಎದುರುದಾರರುಗಳೂ ಕೋಲಾರ ತಾಲ್ಲೂಕು, ಕುರುಗಲ್ ಗ್ರಾಮ ಪಂಚಾಯತ್‌ನಲ್ಲಿ ಕಾರ್ಯದರ್ಶಿಗಳಾಗಿ ಕಾರ್ಯನಿರ್ವಹಿಸುತ್ತಿದ್ದು, ಅವರುಗಳ ವಿರುದ್ಧ ಈ ಕೆಳಗಿನ ಆರೋಪಗಳನ್ನು ದೂರುದಾರರು ಮಾಡಿದ್ದಾರೆ–

1) ಸಾರ್ವಜನಿಕರಿಗೆ ಆಯಾಯ ವರ್ಷದ ಆಯ–ವ್ಯಯ ವಿವರಗಳನ್ನು ಕೊಟ್ಟಿಲ್ಲ;
2) ಹಕ್ಕುಪತ್ರ ಇಲ್ಲದೇ ಹಣ ಪಡೆದು ತಮ್ಮ ಇಚ್ಛೆಯಂತೆ ನಮೂನೆ–9 ಮತ್ತು 10ನ್ನು ವಿತರಿಸಿ ನಿವೇಶನ ಹಂಚಿದ್ದಾರೆ ಮತ್ತು ತಮ್ಮ ಕಡೆಯವರಿಗೂ ನಿವೇಶನಗಳನ್ನು ಕೊಟ್ಟಿದ್ದಾರೆ;
3) ಮನೆ ಕಟ್ಟಲು ಕೊಡುವ ಬಿಲ್ಲುಗಳನ್ನು ಅಕ್ರಮವಾಗಿ ಪಡೆದಿದ್ದಾರೆ;
4) ಪಂಚಾಯತ್‌ಗೆ ಬರುವ ಬೋರ್‌ವೆಲ್ ಮೋಟಾರ್ ಪೈಪುಗಳನ್ನು ಮಾರಾಟ ಮಾಡಿದ್ದಾರೆ;
5) ಗ್ರಾಮ ಪಂಚಾಯತ್ ಹಣದಿಂದ ಕಟ್ಟಿರುವ ಕಟ್ಟಡಗಳು/ಮನೆಗಳು ಸಮರ್ಪಕವಾಗಿರದೇ ಕಳಪೆಯಾಗಿದೆ;
6) ಸರ್ಕಾರಿ ಪ್ರೌಢಶಾಲೆಯ ಕಟ್ಟಡ ಪ್ರಾರಂಭೋತ್ಸವಕ್ಕೆ ಮುನ್ನವೆ ಬಿರುಕು ಬಿಟ್ಟಿದ್ದು, ಮೇಲ್ಛಾವಣಿಯ ಪದರವು ಉದುರುತ್ತಿದೆ.
7) ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಕಟ್ಟಡವು ಬಿರುಕು ಬಿಟ್ಟಿದೆ;
8) ನಿವೇಶನದ ಹಕ್ಕು ಪತ್ರ ಹೊಂದಿರುವವರು ಮೋಸದಿಂದ ನಿವೇಶವನ್ನು ಬೇರೆಯವರಿಗೆ ಕೊಟ್ಟಿದ್ದಾರೆ;
9) ಸರ್ವೆ ನಂ. 51 ರಲ್ಲಿ ನಿವೇಶನ 1 ಮತ್ತು 2ನ್ನು ಹಂಚಿದ್ದು, ಅದೇ ನಿವೇಶನದ ಸಂಖ್ಯೆಯನ್ನು 11 ಮತ್ತು 12 ಎಂದು ತಿದ್ದುಪಡಿ ಮಾಡಿ, ಆ ನಿವೇಶನಗಳನ್ನು ಬೇರೆಯವರಿಗೆ ವಿತರಿಸಿದ್ದಾರೆ;
10) ಸರ್ವೆ ನಂ.51ರಲ್ಲಿ 41 ಎಕರೆ ಜಮೀನಿನ ಪೈಕಿ ಪ್ರೌಢಶಾಲೆಗೆ ನೀಡಿದ 10 ಎಕರೆ 13 ಗುಂಟೆ ಜಮೀನನ್ನು ಹೊರತುಪಡಿಸಿ, ಉಳಿದ ಜಮೀನುಗಳಲ್ಲಿ ನಿವೇಶನಗಳನ್ನು ಮಾಡಿ ಮಾರಾಟ ಮಾಡಿದ್ದಾರೆಂದು ಹೇಳಿದ್ದಾರೆ.

--

ದೂರಿನ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಆರಕ್ಷಕ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಕೋಲಾರ ರವರಿಗೆ ಕೇಳಲಾಗಿ, ಆರಕ್ಷಕ ನಿರೀಕ್ಷಕ-1 (ಇನ್ನು ಮುಂದೆ, 'ತನಿಖಾಧಿಕಾರಿಗಳು' ಎಂದು ಕರೆಯಲ್ಪಡುತ್ತಾರೆ)ರವರು ತಮ್ಮ ತನಿಖಾ ವರದಿಯಲ್ಲಿ-.

ಕೋಲಾರ ತಾಲ್ಲೂಕು, ವೇಮಗಲ್ ಹೋಬಳಿ ಕುರುಗಲ್ ಗ್ರಾಮಪಂಚಾಯತ್ ವ್ಯಾಪ್ತಿಯ ಸರ್ವೆ ನಂ.51 ರಲ್ಲಿ ಒಟ್ಟು 23.07 ಎಕರೆ ಜಮೀನಿದ್ದು, ಸದರಿ ಸರ್ವೆ ನಂಬರಿನಲ್ಲಿ ಕುರುಗಲ್ ಗ್ರಾಮ ಪಂಚಾಯತ್‌ನಿಂದ ವಸತಿ ರಹಿತರಿಗೆ/ನಿರ್ಗತಿಕರಿಗೆ 1971-72ನೇ ಸಾಲಿನಲ್ಲಿ 120 ನಿವೇಶನಗಳು, 1992ನೇ ಸಾಲಿನಲ್ಲಿ 41 ನಿವೇಶನಗಳು, 1997ನೇ ಸಾಲಿನಲ್ಲಿ 100 ನಿವೇಶನಗಳು, 1999ನೇ ಸಾಲಿನಲ್ಲಿ 56 ನಿವೇಶನಗಳು ಮತ್ತು 2003ನೇ ಸಾಲಿನಲ್ಲಿ 12 ನಿವೇಶನಗಳು, ಹೀಗೆ ಒಟ್ಟು 329 ನಿವೇಶನಗಳನ್ನು ವಿತರಣೆ ಮಾಡಿದೆ;

ಕುರುಗಲ್ ಗ್ರಾಮಪಂಚಾಯತ್ ವ್ಯಾಪ್ತಿಯ ಹೌಸ್ ಲಿಸ್ಟ್ ವಹಿಯಲ್ಲಿ ಶ್ರೀ ಮಂಜುನಾಥ ಬಿನ್ ಮಲ್ಲಯ್ಯ ರವರ ಹೆಸರಿನಲ್ಲಿ ಸೈಟ್ ನಂ.11, ಸ್ವತ್ತು ಸಂ.419/1, ಖಾತೆ ನಂ.268 ಎಂದು ಶ್ರೀ ನಾಗರಾಜ್ ಬಿನ್ ನಾರಾಯಣಪ್ಪ ರವರ ಹೆಸರಿನಲ್ಲಿ ಸೈಟ್ ಸಂ.12, ಸ್ವತ್ತು ಸಂ.420/1, ಖಾತೆ ಸಂ.269 ಎಂದು ಬರೆದಿದ್ದು, ಗಣಕಯಂತ್ರ ಪಂಚತಂತ್ರದಲ್ಲಿ ಶ್ರೀ ಮಂಜುನಾಥ ಬಿನ್ ಕೆ. ಮಲ್ಲಯ್ಯ ರವರಹೆಸರಿನಲ್ಲಿ ಸ್ವತ್ತು ಸಂ.419/1, ಖಾತೆ ಸಂ.268 ಮತ್ತು ಶ್ರೀ ನಾಗರಾಜ್ ಬಿನ್ ನಾರಾಯಣಪ್ಪ ರವರ ಹೆಸರಿನಲ್ಲಿ ಸ್ವತ್ತು ಸಂ. 420/1, ಖಾತೆ ನಂ.269 ಎಂದು ನಮೂದಾಗಿದೆ. ಪ್ರಸ್ತುತ ನಿವೇಶನ ಸಂ.1 (ದಾಖಲೆಗಳಲ್ಲಿ-11) ರಲ್ಲಿ ಕುರುಗಲ್ ಗ್ರಾಮದ ಶ್ರೀ ರಾಮಸ್ವಾಮಿ ಬಿನ್ ಮುನಿಶ್ಯಾಮಪ್ಪ ರವರು ಪೆಟ್ಟಿಗೆ ಅಂಗಡಿ; ನಿವೇಶನ ಸಂ.2 (ದಾಖಲೆಗಳಲ್ಲಿ-11) ರಲ್ಲಿ ಕುರುಗಲ್ ಗ್ರಾಮದ ಶ್ರೀ ರಾಮಸ್ವಾಮಿ ಬಿನ್ ಮುನಿಶ್ಯಾಮಪ್ಪ ರವರು ಪೆಟ್ಟಿಗೆ ಅಂಗಡಿ; ನಿವೇಶನ ಸಂ.2 (ದಾಖಲೆಗಳಲ್ಲಿ-12) ರಲ್ಲಿ ಕಲ್ಕೆರೆ ಗ್ರಾಮದ ಶ್ರೀ ದೇವರಾಜ್ ಬಿನ್ ಕೆಂಪಣ್ಣ ರವರು ಟ್ರ್ಯಾಕ್ಟರ್ ಶೆಡ್ ಹಾಕಿಕೊಂಡಿದ್ದಾರೆ. ಶ್ರೀ ಕೆ.ಎಂ. ವೆಂಕಟೇಶಪ್ಪ ಬಿನ್ ಮುನಿಯಪ್ಪ ರವರ ಹೆಸರಿನಲ್ಲಿ ನಿವೇಶನ ಸಂ.21 ಮತ್ತು 30 ಹೌಸ್ ಲಿಸ್ಟ್ ವಹಿಯಲ್ಲಿ ನಮೂದಿಸಿದ್ದು, ಸೈಟ್ ನಂ.30 ಶ್ರೀ ವೆಂಕಟೇಶಪ್ಪ ರವರ ಹೆಸರಿನಿಂದ ಶ್ರೀಮತಿ ಗೌರಮ್ಮ ಕೋಂ ವೆಂಕಟಪ್ಪ ರವರ ಹೆಸರಿಗೆ ಖಾತೆ ಬದಲಾವಣೆಯಾಗಿದೆ. ನಿವೇಶನ ಸಂ.21 ಶ್ರೀ ಕೆ.ಎಂ. ವೆಂಕಟೇಶಪ್ಪ ರವರ ಹೆಸರಿನಲ್ಲಿದೆ;

ಕುರುಗಲ್ ಗ್ರಾಮಪಂಚಾಯತ್ ವ್ಯಾಪ್ತಿಯ ಹೌಸ್ ಲಿಸ್ಟ್ ವಹಿಯಲ್ಲಿ ಶ್ರೀ ಮಂಜುನಾಥ ಬಿನ್ ಕೆ.ಮಲ್ಲಯ್ಯ ರವರ ಹೆಸರಿನಲ್ಲಿದ್ದನಿವೇಶನ ಸಂ.1ನ್ನು 11 ಮತ್ತು ಶ್ರೀ ನಾಗರಾಜ್ ಬಿನ್ ನಾರಾಯಣಪ್ಪ ರವರ ಹೆಸರಿನಲ್ಲಿದ್ದ ನಿವೇಶನ ಸಂ.2ನ್ನು 12 ಎಂದು ನಮೂದಿಸಿ,ನಮೂನೆ-9 ಮತ್ತು 10ನ್ನು ನೀಡಿರುವುದು ಕುರುಗಲ್ ಗ್ರಾಮ ಪಂಚಾಯತ್‌ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಕಾರ್ಯದರ್ಶಿಯಾದ ಶ್ರೀ ಶಿವಾನಂದ್ ರವರು ನೀಡಿರುವುದಾಗಿ ಫಲಾನುಭವಿಗಳು ತಿಳಿಸಿರುವುದರಿಂದ ಹಾಗೂ ಹೌಸ್‌ಲಿಸ್ಟ್ ವಹಿ ಮತ್ತು ಇತರೆ ದಾಖಲೆಗಳನ್ನು ದಿನಾಂಕ: 18/05/2007 ರಂದು ಬೆಂಗಳೂರು ಲೋಕಾಯುಕ್ತದವರು ಅಮಾನತ್ತು ಪಡಿಸಿಕೊಂಡು ವಿಚಾರಣೆ ನಡೆಯುತ್ತಿರುವುದಾಗಿ ಪಂಚಾಯತ್ ಅಧಿಕಾರಿಗಳಿಂದ ತಿಳಿದು ಬಂದಿದೆಯೆಂದು ಹೇಳಿದ್ದಾರೆ.

ದೂರಿಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ- ತಾವು ದಿನಾಂಕ: 28/05/1998 ರಲ್ಲಿ ಪಂಚಾಯತ್ ಕಾರ್ಯದರ್ಶಿ ಹುದ್ದೆಗೆ ನೇಮಕಗೊಂಡು ಕುರುಗಲ್ ಗ್ರಾಮ ಪಂಚಾಯತ್‌ನಲ್ಲಿ ಕರ್ತವ್ಯಕ್ಕೆ ವರದಿಮಾಡಿಕೊಂಡಿದ್ದು, ಕುರುಗಲ್ ಗ್ರಾಮದ ಸರ್ವೆ ನಂ.51 ರಲ್ಲಿ 1971-72ನೇ ಸಾಲಿನಲ್ಲಿ 120 ನಿವೇಶನಗಳು, 1992ನೇ ಸಾಲಿನಲ್ಲಿ 41 ನಿವೇಶನಗಳು ಮತ್ತು 1997ನೇ ಸಾಲಿನಲ್ಲಿ 10 ನಿವೇಶನಗಳನ್ನು ಕೋಲಾರ ತಹಶೀಲ್ದಾರರು ನಿವೇಶನ ರಹಿತರಿಗೆ ನೀಡಿದ್ದಾರೆ. ಸದರಿ ಹಕ್ಕುಪತ್ರಗಳನ್ನು ವಿತರಿಸುವ ಸಮಯದಲ್ಲಿ ತಾವು ಸರ್ಕಾರಿ ಕೆಲಸಕ್ಕೆ ನೇಮಕಗೊಂಡಿಲ್ಲ. ನಿವೇಶನ ಸಂಖ್ಯೆ-1 ಮತ್ತು 2ರ ಖಾತೆಗಳು ಮತ್ತು ಹೌಸ್‌ಲಿಸ್ಟ್ ನಮೂದು 1971-72ನೇ ಸಾಲಿನಲ್ಲಿ ಆಗಿದೆ. ಪಂಚಾಯತ್‌ನಲ್ಲಿ ಲಭ್ಯವಿದ್ದ ದಾಖಲೆಗಳ ಪ್ರಕಾರ ತಾವು ದಾಖಲೆಗಳ ನಕಲು ಪ್ರತಿಗಳನ್ನು ವಿತರಿಸಿದ್ದು, ಸದರಿ ಪಂಚಾಯತ್‌ನಿಂದ ವರ್ಗಾವಣೆಯಾದ ನಂತರ ದಾಖಲೆಗಳನ್ನು ತಿದ್ದಿರುವ ಬಗ್ಗೆ ತಮಗೆ ತಿಳಿದಿಲ್ಲವೆಂದು ಹೇಳಿದ್ದಾರೆ.

ಎರಡನೇ (2ನೇ) ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿಲ್ಲ. 1ನೇ ಎದುರುದಾರರ ಆಕ್ಷೇಪಣೆಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ಪ್ರತ್ಯುತ್ತರವನ್ನು ಸಲ್ಲಿಸಿಲ್ಲ.

ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ;

1) ಒಂದನೇ ಎದುರುದಾರರು ಕುರುಗಲ್ ಗ್ರಾಮ ಪಂಚಾಯತ್‌ನಲ್ಲಿ 1998 ರಿಂದ 2000 ರವರೆಗೆ ಮತ್ತು ದಿನಾಂಕ: 01/04/2000 ರಿಂದ 24/08/2000 ರವರೆಗೆ ಕಾರ್ಯದರ್ಶಿಯಾಗಿ ಹಾಗೂ 2005 ರಿಂದ 2006 ಮತ್ತು 03/07/2014 ರಿಂದ 26/09/2014 ರವರೆಗೆ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದಾರೆಂದು ತನಿಖಾ ವರದಿಯಲ್ಲಿ ಹೇಳಿದೆ:
2) ಎರಡನೇ ಎದುರುದಾರರು ಕುರುಗಲ್ ಗ್ರಾಮ ಪಂಚಾಯತ್‌ನಲ್ಲಿ ಕಾರ್ಯದರ್ಶಿಯಾಗಿ 2006-07ನೇ ಸಾಲಿನಲ್ಲಿ ಕರ್ತವ್ಯ ನಿರ್ವಹಿಸಿದ್ದಾರೆಂದು ಸದರಿಯವರು ತನಿಖಾಧಿಕಾರಿಗಳಿಗೆ ನೀಡಿದ ಹೇಳಿಕೆಯಲ್ಲಿ ತಿಳಿಸಿದ್ದಾರೆ;
3) ದೂರಿನಲ್ಲಿ ಮಾಡಿದಂತಹ ಆಪಾದನೆಗಳು ಯಾವ ಅವಧಿಯಲ್ಲಿ ನಡೆದಿದೆ? ಎಂಬ ಅಂಶವು ದೂರು ಪರಿಶೀಲನೆಯಲ್ಲಿ ಕಂಡು ಬಂದಿಲ್ಲ ಮತ್ತು ದೂರಿನ 1 ರಿಂದ 8ನೇ ಆಪಾದನೆಗಳಲ್ಲಿ ನಿಖರತೆ ಇಲ್ಲ. ದೂರಿನ 6 ಮತ್ತು 7ನೇ ಆಪಾದನೆಯು ಸರ್ಕಾರಿ ಪ್ರೌಢ ಶಾಲೆ ಮತ್ತು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಕಟ್ಟಡದ ಕಳಪೆ ಕಾಮಗಾರಿಗೆ ಸಂಬಂಧಿಸಿದೆ. ದೂರಿನ 9 ಮತ್ತು 10ನೇ ಆಪಾದನೆಗಳು ಸರ್ವೆ ನಂ.51 ರಲ್ಲಿ ನಿವೇಶನ ಹಂಚಿಕೆಯಲ್ಲಾದ ಅವ್ಯವಹಾರಕ್ಕೆ ಸಂಬಂಧಿಸಿದೆ.
4) ಕೋಲಾರ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು (ಪ್ರಭಾರ) ರವರನ್ನು ತನಿಖಾಧಿಕಾರಿಯನ್ನಾಗಿ ನೇಮಿಸಿದ್ದಾರೆ ಮತ್ತು ಸದರಿಯವರು ಪ್ರಾಥಮಿಕ ಪರಿಶೀಲನಾ ವರದಿಯನ್ನು ಸಲ್ಲಿಸಿರುವುದು ಕಡತದಲ್ಲಿರುವ ಕಡತ ಸಂಖ್ಯೆ-9 ರಲ್ಲಿ ಕಂಡು ಬಂದಿದೆ. ಸದರಿ ವರದಿಯನ್ವಯ-
5) ಕೋಲಾರ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು (ಪ್ರಭಾರ) ರವರನ್ನು ತನಿಖಾಧಿಕಾರಿಯನ್ನಾಗಿ ನೇಮಿಸಿದ್ದಾರೆ ಮತ್ತು ಸದರಿಯವರು ಪ್ರಾಥಮಿಕ ಪರಿಶೀಲನಾ ವರದಿಯನ್ನು ಸಲ್ಲಿಸಿರುವುದು ಕಡತದಲ್ಲಿರುವ ಕಡತ ಸಂಖ್ಯೆ-9 ರಲ್ಲಿ ಕಂಡು ಬಂದಿದೆ. ಸದರಿ ವರದಿಯನ್ವಯ-

ಅ) ಕುರುಗಲ್ ಸರ್ಕಾರಿ ಪ್ರೌಢ ಶಾಲೆ ಕಟ್ಟಡವನ್ನು ತಾಲ್ಲೂಕ್ ಪಂಚಾಯತ್ ವತಿಯಿಂದ ನಿರ್ಮಿಸಿದೆಯೆಂದು ಕಂಡು ಬಂದಿದೆ. ಸದರಿ ಶಾಲಾ ಕಟ್ಟಡ ನಿರ್ಮಾಣಕ್ಕೆ ಸಂಬಂಧಪಟ್ಟ ದಾಖಲೆಗಳಿಲ್ಲ;

ಆ) ಕುರುಗಲ್ ಗ್ರಾಮದ ಶ್ರೀ ಹಫೀಜ್ ಸಾಬಿ ಬಿನ್ ಖಾದಿರ್ ಸಾಬಿ ರವರಿಗೆ 2003-04ನೇ ಸಾಲಿನಲ್ಲಿ ಕಚ್ಚಾ ಮನೆ ಮಂಜೂರಾಗಿದ್ದು, ವಾಸ್ತವಿಕವಾಗಿ ಯಾವುದೇ ಕಾಮಗಾರಿ ಮಾಡದೇ ಕಾಮಗಾರಿ ಆಗಿದೆಯೆಂದು ಸದರಿ ಫಲಾನುಭವಿಯ ಖಾತೆಗೆ ದಿನಾಂಕ: 18/06/2005 ರ ಚೆಕ್ ಸಂಖ್ಯೆ: 962183 ರಲ್ಲಿ ರೂ.10,000/-ಗಳನ್ನು ನೀಡಿದೆ. ಸದರಿ ಹಣ ದುರುಪಯೋಗವಾಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ;

ಇ) ಕುರುಗಲ್ ಗ್ರಾಮದ ಶ್ರೀ ನಾರಾಯಣಪ್ಪ ಬಿನ್ ಈಶ್ವರಪ್ಪ ರವರಿಗೆ 2005–06ನೇ ಸಾಲಿನಲ್ಲಿ ಕಚ್ಚಾ ಮನೆ ಮಂಜೂರಾಗಿದ್ದು, ಸ್ಥಳ ತನಿಖೆ ನಡೆಸಿದಾಗ, ಮನೆಯ ಮುಂದೆ ಮತ್ತು ಹಿಂದಿನ ಗೋಡೆಗೆ ಪ್ಲಾಸ್ಟರಿಂಗ್ ಮತ್ತು ಸುಣ್ಣ ಹೊಡೆಸಿರುವುದು ಕಂಡು ಬಂದಿದ್ದು. ಸದರಿಯವರಿಗೆ ಮಂಜೂರಾಗಿದೆಯೆಂದು ಹೇಳಿದ ರೂ.10,000/–ಕ್ಕೆ ಸಂಬಂಧಪಟ್ಟಂತೆ ಚೆಕ್ ನಂಬರ್ ಮತ್ತು ಸಹಿ ಇಲ್ಲ ಹಾಗೂ ನಗದು ವಹಿಯಲ್ಲಿ ಈ ಬಗ್ಗೆ ವಿವರ ಇಲ್ಲ;

ಈ) ಕುರುಗಲ್ ಗ್ರಾಮದ ಶ್ರೀಮತಿ ಭಾಗ್ಯಮ್ಮ ಬಿನ್ ನಾರಾಯಣಪ್ಪ ರವರಿಗೆ ಇಂದಿರಾ ಆವಾಸ್ ಯೋಜನೆಯಡಿ 2004–05ನೇ ಸಾಲಿನಲ್ಲಿ ಮನೆ ಮಂಜೂರಾಗಿದ್ದು, ಅದಕ್ಕೆ ಸಂಬಂಧಿಸಿದಂತೆ ದಿನಾಂಕ: 31/05/2005 ರ ಚೆಕ್ ಸಂಖ್ಯೆ: 962177ರಲ್ಲಿ ರೂ.5,000/–, ದಿನಾಂಕ: 14/10/2005 ರ ಚೆಕ್ ಸಂಖ್ಯೆ:962188 ರಲ್ಲಿ ರೂ.7,000/– ಮತ್ತು ಚೆಕ್ ಸಂಖ್ಯೆ: 962189ರಲ್ಲಿ ರೂ.7,500/– ಪಾವತಿಯಾಗಿದ್ದು, ಮನೆ ನಿರ್ಮಾಣ ಮಾಡದೇ, ಹಳೆಯ ಮನೆಯ ಹಿಂಬದಿ ಫೋಟೋ ಪಡೆದು, ಅದೇ ಹೊಸ ಮನೆಯೆಂದು ಬಿಲ್ಲನ್ನು ನೀಡಿದೆ. ಕಾರಣ, ಸದರಿ ಹಣ ದುರುಪಯೋಗವಾಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ;

ಉ) ಕುರುಗಲ್ ಗ್ರಾಮದ ಶ್ರೀ ಅಂಜಿನಪ್ಪ ಬಿನ್ ನಾರಾಯಣಪ್ಪ ರವರಿಗೆ ಇಂದಿರಾ ಆವಾಸ್ ಯೋಜನೆಯಡಿ 2003–04ನೇ ಸಾಲಿನಲ್ಲಿ ಮನೆ ಮಂಜೂರಾಗಿದ್ದು, ಅದಕ್ಕೆ ಸಂಬಂಧಿಸಿದಂತೆ ದಿನಾಂಖ: 04/10/2005 ರ ಚೆಕ್ ಸಂಖ್ಯೆ:962186ರಲ್ಲಿ ರೂ.5000/– ಮತ್ತು ದಿನಾಂಕ: 10/10/2005 ರ ಚೆಕ್ ಸಂಖ್ಯೆ: 962187ರಲ್ಲಿ ರೂ.7,000/– ಪಾವತಿಯಾಗಿದ್ದು, ಮನೆ ನಿರ್ಮಾಣ ಮಾಡದೇ, ಬಿಲ್ಲನ್ನು ನೀಡಿದೆ. ಕಾರಣ, ಸದರಿ ಹಣ ದುರುಪಯೋಗವಾಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ;

ಊ) ಶ್ರೀ ವಿ.ಮುನಿರಾಜು ಬಿನ್ ವೆಂಕಟಪ್ಪ, ವಿಶ್ವನಗರ ರವರಿಗೆ 2004–05ನೇ ಸಾಲಿನಲ್ಲಿ ಕಚ್ಚಾ ಮನೆ ಮಂಜೂರಾಗಿದ್ದು, ಅದಕ್ಕೆ ಸಂಬಂಧಿಸಿದಂತೆ ನಗದು ವಹಿ ಮತ್ತು ಬಿಲ್ಲಿನಲ್ಲಿ ಚೆಕ್ ಸಂಖ್ಯೆ ಮತ್ತು ದಿನಾಂಕದ ವಿವರಗಳಿಲ್ಲ ಹಾಗೂ ಇವರು ನೀಡಿರುವ ಕಾಮಗಾರಿ ಹಿಂದಿನ ಫೋಟೋಗೂ ಮತ್ತು ನಂತರ ನೀಡಿರುವ ಫೋಟೋಗೂ ತಾಳೆಯಾಗುತ್ತಿಲ್ಲ. ಕಾರಣ ಸದರಿ ಹಣ ದುರುಪಯೋಗವಾಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ;

ಋ) ಶ್ರೀಮತಿ ಸಾದಮ್ಮ ಬಿನ್ ಮುನೇಶಪ್ಪ, ವಿಶ್ವನಗರ ರವರಿಗೆ ಇಂದಿರಾ ಆವಾಸ್ ಯೋಜನೆಯಡಿ ಕಚ್ಚಾ ಮನೆ ಮಂಜೂರಾಗಿದ್ದು, ಅದಕ್ಕೆ ಸಂಬಂಧಿಸಿದಂತೆ ದಿನಾಂಕ: 07/04/2005 ರ ಚೆಕ್ ಸಂಖ್ಯೆ: 962180 ರಲ್ಲಿ ರೂ.6,000/– ಮತ್ತು ದಿನಾಂಕ: 20/09/2005 ರ ಚೆಕ್ ಸಂಖ್ಯೆ: 962184 ರಲ್ಲಿ ರೂ. 6,000/–ಗಳನ್ನು ಪಾವತಿಸಿದ್ದು, ಇವರು ನೀಡಿರುವ ಕಾಮಗಾರಿಯ ಹಿಂದಿನ ಫೋಟೋಗೂ ಮತ್ತು ನಂತರ ನೀಡಿರುವ ಫೋಟೋಗೂ ತಾಳೆಯಾಗುತ್ತಿಲ್ಲ. ಕಾರಣ, ಸದರಿ ಹಣ ದುರುಪಯೋಗವಾಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ.

ಸದರಿ ಹಣ ಪಾವತಿಗೆ ಸಂಬಂಧಿಸಿದಂತೆ, ಕಿರಿಯ ಅಭಿಯಂತರರ ವರದಿಯನ್ನಾಧರಿಸಿ, ಪಂಚಾಯತ್ ಕಾರ್ಯದರ್ಶಿ/ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿದ್ದ 1ನೇ ಎದುರುದಾರರು ಸ್ಥಳ ಪರಿಶೀಲನೆ ನಡೆಸಿ ಮನೆಯ ನಿರ್ಮಾಣ ಕೆಲಸವು ಆಯಾಯ ಹಂತದಲ್ಲಿ ಪೂರ್ಣಗೊಂಡಿದೆಯೆಂದೂ ಫಲಾನುಭವಿಗಳಿಗೆ (ಶ್ರೀಮತಿ ಭಾಗಮ್ಮ ಬಿನ್ ನಾರಾಯಣಪ್ಪ ರವರಿಗೆ ಚೆಕ್ ಸಂಖ್ಯೆ:962177, ದಿನಾಂಕ: 31/01/2005, 962188, ದಿನಾಂಕ: 10/10/2015 & 962189, ದಿನಾಂಕ: 08/10/2005 ಒಟ್ಟು ರೂ.19,500/–, ಶ್ರೀ ಅಂಜಿನಪ್ಪ ಬಿನ್ ನಾರಾಯಣಪ್ಪ ರವರಿಗೆ ಚೆಕ್ ಸಂಖ್ಯೆ:962186, ದಿನಾಂಕ: 04/10/2005 & 962187, ದಿನಾಂಕ: 10/10/2005 ಒಟ್ಟು ರೂ.12,000/– ಶ್ರೀ ನಾರಾಯಣಪ್ಪ ಬಿನ್ ಈಶ್ವರಪ್ಪ ರವರಿಗೆ ರೂ.10,000/– (ಚೆಕ್ ಸಂಖ್ಯೆ ಮತ್ತು

ದಿನಾಂಕ ಲಭ್ಯವಿಲ್ಲ) ಮತ್ತು ಶ್ರೀ ಹಫೀಜ್ ಸಾಬಿ ಬಿನ್ ಖಾದಿರ್ ಸಾಬಿ ರವರಿಗೆ ದಿನಾಂಕ: 18/06/2005ರ ಚೆಕ್ ಸಂಖ್ಯೆ: 962183ರಲ್ಲಿ ರೂ.10,000/-) ಹಣ ಮಂಜೂರು ಮಾಡಬಹುದೆಂದೂ ಶಿಫಾರಸ್ಸು ಮಾಡಿ, ಸಹಿ.. ಮಾಡಿರುವುದು ಕಂಡು ಬಂದಿದೆ. ಮನೆಗಳನ್ನು ನಿರ್ಮಾಣ ಮಾಡದೇ, ಫಲಾನುಭವಿಗಳಿಗೆ ಒಟ್ಟು ರೂ.51,500/- ಹಣ ಮಂಜೂರು ಮಾಡಬಹುದೆಂದು 1ನೇ ಎದುರುದಾರರು ಸ್ಥಳ ಪರಿಶೀಲನೆ ನಡೆಸದೇ, ಶಿಫಾರಸ್ಸು ಮಾಡಿ, ಕರ್ತವ್ಯ ಲೋಪ ಎಸಗಿರುವುದಲ್ಲದೇ, ಸದರಿ ಹಣ ರೂ.51,500/- ದುರುಪಯೋಗಕ್ಕೆ ಜವಾಬ್ದಾರರಾಗಿದ್ದರೆ;

ಹಕ್ಕುಪತ್ರ ಇಲ್ಲದೇ ಹಣ ಪಡೆದು ತಮ್ಮ ಇಚ್ಛೆಯಂತೆ ನಮೂನೆ-9 ಮತ್ತು 10ನ್ನು ವಿತರಿಸಿ ನಿವೇಶನ ಹಂಚಿದ್ದಾರೆ ಮತ್ತು ತಮ್ಮ ಕಡೆಯವರಿಗೂ ನಿವೇಶನಗಳನ್ನು ಕೊಟ್ಟಿದ್ದಾರೆಂಬ ಆಪಾದನೆಗೆ ಸಂಬಂಧಿಸಿದಂತೆ, ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ಕೋಲಾರ ರವರು ಕೋಲಾರ ತಹಶೀಲ್ದಾರರಿಗೆ ಬರೆದ ದಿನಾಂಕ: 16/12/2009 ರ ಪತ್ರದಲ್ಲಿ ಕುರುಗಲ್ ಗ್ರಾಮದ ಸರ್ವೆ ನಂ.51ರಲ್ಲಿ ದಿನಾಂಕ: 26/01/1992 ರಲ್ಲಿ 43 ಫಲಾನುಭವಿಗಳಿಗೆ, 1997-98ನೇ ಸಾಲಿನಲ್ಲಿ 100 ಫಲಾನುಭವಿಗಳಿಗೆ ಮತ್ತು 2003-04ನೇ ಸಾಲಿನಲ್ಲಿ 12 ಫಲಾನುಭವಿಗಳಿಗೆ, ಹೀಗೆ ಒಟ್ಟು ಮೂರು ಬಾರಿ 155 ಫಲಾನುಭವಿಗಳಿಗೆ ಮಾತ್ರ ಹಕ್ಕು ಪತ್ರಗಳನ್ನು ನಿಯಮಾನುಸಾರ ಹಂಚಿಕೆ ಮಾಡಿಯೆಂದು ಹೇಳಿದೆ. ಸದರಿ ಫಲಾನುಭವಿಗಳಿಗೆ ನಿವೇಶನಗಳನ್ನು ಪಡೆಯಲು ಅರ್ಹತೆ/ಅನರ್ಹತೆ ನಿರ್ಧರಿಸುವ ಬಗ್ಗೆ ದಾಖಲೆಗಳಿಲ್ಲ;

ಇಂದಿರಾ ಆವಾಸ್ ಯೋಜನೆಯಡಿ ಮತ್ತು ಕಚ್ಚಾ ಮನೆ ನಿರ್ಮಾಣದ ಬಗ್ಗೆ ಫಲಾನುಭವಿಗಳಿಗೆ ಸರ್ಕಾರದಿಂದ ಬಿಡುಗಡೆಯಾದ ಅನುದಾನ ಮೊತ್ತದ ದುರುಪಯೋಗಕ್ಕೆ ಸಂಬಂಧಿಸಿದಂತೆ ಕಾಲಮಿತಿ ಬಾಧಕವನ್ನು ಮನ್ನಿಸಿ, 1ನೇ ಎದುರುದಾರರ ವಿರುದ್ಧದ ಆಪಾದನೆಗಳು ಮೇಲ್ನೋಟಕ್ಕೆ ಸಾಬೀತಾಗಿದೆ;

12ನೇ ಎದುರುದಾರರು ಕುರುಗಲ್ ಗ್ರಾಮ ಪಂಚಾಯತ್‌ನಲ್ಲಿ 2006-07ನೇ ಸಾಲಿನಲ್ಲಿ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸಿದ್ದಾರೆ. ಸದರಿಯವರ ವಿರುದ್ಧ ನಿಖರವಾದ ಆಪಾದನೆಗಳು ಇಲ್ಲ.

ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು, ಆಕ್ಷೇಪಣೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಸದರಿ 1ನೇ ಎದುರುದಾರರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

ಎರಡನೇ (2ನೇ) ಎದುರುದಾರರ ವಿರುದ್ಧ ನಿಖರವಾದ ಆಪಾದನೆ ಇಲ್ಲವಾದ್ದರಿಂದ, 2ನೇ ಎದುರುದಾರರ ವಿರುದ್ಧದ ನಡವಳಿಯನ್ನು ಕೈಬಿಟ್ಟಿದೆ.

ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, 1ನೇ ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ದುರ್ನಡತೆ ಮೇಲ್ನೋಟಕ್ಕೆ ಕಂಡು ಬರುತ್ತದೆ.

ಅದಲ್ಲದೆ 1ನೇ ಎದುರುದಾರರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ ಹಾಗೂ ಎದುರುದಾರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ) ರಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವಂತೆ ಕೋರಿದ್ದಾರೆ.

ಸರ್ಕಾರವು ಮಾನ್ಯ ಉಪಲೋಕಾಯುಕ್ತರ ವರದಿಯನ್ನು ಪರಿಶೀಲಿಸಿ ಕೋಲಾರ ಜಿಲ್ಲೆ, ಕೋಲಾರ ತಾಲ್ಲೂಕು, ಕುರುಗಲ್ ಗ್ರಾಮ ಪಂಚಾಯತ್ ಕಾರ್ಯದರ್ಶಿಯಾಗಿದ್ದ ಶ್ರೀ.ಕೆ.ಶಿವಾನಂದ ಕುಮಾರ್(ಪ್ರಸ್ತುತ ಹುತ್ತೂರು ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ) ರವರ ವಿರುದ್ಧ ವಿಚಾರಣೆ ನಡೆಸುವುದು ಸೂಕ್ತವೆಂದು ಭಾವಿಸಿ ಕರ್ನಾಟಕ ನಾಗರೀಕ ಸೇವಾ(ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ)ನಿಯಮಗಳು 1957 ರ ನಿಯಮ. 14(ಎ) ರನ್ವಯ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರಿಗೆ. ವಹಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/182/ಗ್ರಾಪಂಕಾ/2019**
**ಬೆಂಗಳೂರು, ದಿನಾಂಕ: 13-05-2019.**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಜೆ.ವರದರಾಜುಲು, ಕಾರ್ಯದರ್ಶಿ ಪ್ರಭಾರ ಪಂಚಾಯತ್ ಅಭಿವೃದ್ಧಿ ಅಧಿಕಾರಿ (ಪ್ರಸ್ತುತ ಮುಳಬಾಗಿಲು ತಾಲ್ಲೂಕು, ಸೊನ್ನವಾಡಿ ಗ್ರಾಮ ಪಂಚಾಯತ್) ಮತ್ತು ಪ್ರಭಾರ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿದ್ದ ಶ್ರೀ ವಿ.ವೆಂಕಟಸ್ವಾಮಿ (ಪ್ರಸ್ತುತ ಕಾರ್ಯದರ್ಶಿ-1ನೇ ಶ್ರೇಣಿ, ಘಟ್ಟ ಮಾದಮಂಗಲ ಗ್ರಾಮ ಪಂಚಾಯತ್) ಇವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 14(ಎ) ರಡಿ ಮಾನ್ಯ ಉಪಲೋಕಾಯುಕ್ತರು ರವರಿಗೆ ವಹಿಸಿ ಆದೇಶಿಸಿದೆ.

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು ಆಪಾದಿತರಿಗೆ ನಿಯಮಾನುಸಾರ ಸೂಕ್ತ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

15/5/19

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ,

1. ಮಹಾಲೇಖಪಾಲರು, ಬೆಂಗಳೂರು, ಕರ್ನಾಟಕ.
2. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು. (ಪುಟ 1 ರಿಂದ 99 ರವರೆಗೆ ಮೂಲ ದಾಖಲೆಗಳನ್ನು ಇದರೊಂದಿಗೆ ಲಗತ್ತಿಸಿ ಹಿಂದಿರುಗಿಸಿದೆ).
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಕೋಲಾರ ಜಿಲ್ಲೆ.
5. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ ಕೋಲಾರ, ಕೋಲಾರ ಜಿಲ್ಲೆ.
6. ಶ್ರೀ ಕೆ.ಶಿವಾನಂದ ಕುಮಾರ್, ಕಾರ್ಯದರ್ಶಿ, ಕುರುಗಲ್ ಗ್ರಾಮ ಪಂಚಾಯತಿ (ಪ್ರಸ್ತುತ ಹುತ್ತೂರು ಗ್ರಾಮ ಪಂಚಾಯತಿ), ಕೋಲಾರ ತಾಲ್ಲೂಕು, ಕೋಲಾರ ಜಿಲ್ಲೆ.
7. ಗಣಕ ಕೋಶ.
8. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.